ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1398

ಸದಸ್ಯರ ಹೆಸರು : ಡಾ: ತೇಜಸ್ವಿನಿ ಗೌಡ,(ವಿಧಾನ ಸಭೆಯಿಂದ ಚುನಾಯಿತರಾದವರು)

ಉತ್ತರಿಸುವ ಸಚಿವರು : ತೋಟಗಾರಿಕೆ ಹಾಗೂ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು

ಉತ್ತರಿಸುವ ದಿನಾಂಕ : 24-12-2021

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಸಹ್ಯಾದ್ರಿ ಮಡಿಲಲ್ಲಿರುವ ಮಲೆನಾಡಿನ ಯಾವ ಯಾವ ಜಿಲ್ಲೆಗಳಲ್ಲಿ ತೋಟಗಾರಿಕಾ ಬೆಳೆಗಳನ್ನು ಬೆಳೆಯಲಾಗುತ್ತಿದೆ; ಯಾವ ಯಾವ ರೀತಿಯ ಬೆಳೆ ಉತ್ಪನ್ನಗಳ ಪ್ರಮಾಣ ಎಷ್ಟು;	ಸಹ್ಯಾದ್ರಿ ಮಡಿಲಲ್ಲಿರುವ ಮಲೆನಾಡಿನ ಜಿಲ್ಲೆಗಳಾದ ಉತ್ತರ ಕನ್ನಡ, ಶಿವಮೊಗ್ಗ, ಉಡುಪಿ, ಚಿಕ್ಕಮಗಳೂರು, ಹಾಸನ, ದಕ್ಷಿಣ ಕನ್ನಡ, ಕೊಡಗು ಜಿಲ್ಲೆಗಳಲ್ಲಿ ತೋಟಗಾರಿಕೆ ಬೆಳೆಗಳನ್ನು ಬೆಳೆಯಲಾಗುತ್ತಿದೆ. ಈ ಜಿಲ್ಲೆಯಲ್ಲಿ ಬೆಳೆಯಲಾಗುತ್ತಿರುವ ಬೆಳೆಗಳು ಈ ಕೆಳಕಂಡಂತಿವೆ. 1. ಹಣ್ಣುಗಳು 2. ತರಕಾರಿಗಳು 3. ಸಾಂಬಾರು ಬೆಳೆಗಳು 4. ತೋಟದ ಬೆಳೆಗಳು 5. ವಾಣಿಜ್ಯ ಪುಷ್ಪಗಳು 6. ಸುಗಂಧಿತ ಬೆಳೆಗಳು 7. ಔಷಧೀಯ ಬೆಳೆಗಳು ಮಲೆನಾಡಿನ ಜಿಲ್ಲೆಗಳ ತೋಟಗಾರಿಕೆ ಬೆಳೆಗಳ ವಿಸ್ತೀರ್ಣ ಹಾಗೂ ಉತ್ಪನ್ನದ ಪ್ರಮಾಣವನ್ನು ಅನುಬಂಧ – 1 ರಲ್ಲಿ ನೀಡಲಾಗಿದೆ.
ಆ)	ಮಲೆನಾಡಿನ ಪ್ರದೇಶದಲ್ಲಿ ಎಷ್ಟು ಸಂಖ್ಯೆಯ ಹಸಿರು ಮನೆ (Green House) ಯೋಜನೆ ಜಾರಿಯಾಗಿದೆ; ಯಾವ ಯಾವ ರೀತಿ ರಿಯಾಯಿತಿ-ವಿನಾಯಿತಿ (ಸಬ್ಸಿಡಿ) ಕುರಿತು ಪೂರ್ಣ ಮಾಹಿತಿ ನೀಡುವುದು?	ಮಲೆನಾಡಿನ ಪ್ರದೇಶದಲ್ಲಿ ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿ 2021-22 ನೇ ಸಾಲಿನಲ್ಲಿ ಹಸಿರು ಮನೆ (Green House) ಘಟಕಕ್ಕೆ ನಿಗಧಿಯಾಗಿರುವ ಗುರಿಗಳು ಈ ಕೆಳಕಂಡಂತಿರುತ್ತವೆ.

(ಭೌತಿಕ ಹೆ/ಆರ್ಥಿಕ ರೂ ಲಕ್ಷಗಳಲ್ಲಿ)

ಕ್ರ.ಸಂ	ಜಿಲ್ಲೆಗಳು	ಭೌತಿಕ	ಆರ್ಥಿಕ
1	ಉತ್ತರ ಕನ್ನಡ	1.2	50.4
2	ಶಿವಮೊಗ್ಗ	0	0
3	ಉಡುಪಿ	0	0
4	ಚಿಕ್ಕಮಗಳೂರು	1.4	58.8
5	ದಕ್ಷಿಣ ಕನ್ನಡ	0.2	8.4
6	ಹಾಸನ	1.4	58.8
7	ಕೊಡಗು	0.4	16.80
ಒಟ್ಟು		**4.6**	**193.2**

ಪ್ರಸಕ್ತ ಸಾಲಿನಲ್ಲಿ ಪ್ರತಿ ಫಲಾನುಭವಿಗೆ ಘಟಕ ವೆಚ್ಚ ರೂ.789.00 ರಿಂದ ರೂ.817/ ಚದರ ಮೀಟರ್ ರಂತೆ ಸಾಮಾನ್ಯ ವರ್ಗದ ರೈತರಿಗೆ ಶೇ. 50 ರಂತೆ ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ರೈತರಿಗೆ ಶೇ.90 ರಂತೆ ಸಹಾಯಧನ ನೀಡಲು ಹಾಗೂ ಪ್ರತಿ ಫಲಾನುಭವಿಗೆ ಗರಿಷ್ಠ 4000 ಚ.ಮೀ ಹಸಿರುಮನೆ ನಿರ್ಮಿಸಿಕೊಳ್ಳಲು ಅವಕಾಶವಿರುತ್ತದೆ.

ಇ)	ಮಹಿಳಾ ಕೃಷಿಕರಿಗೆ ವಿಶೇಷವಾದ ಸಬ್ಸಿಡಿ ಯೋಜನೆ ಇದೆಯೇ; ಎಷ್ಟು ಮಂದಿ ಬಳಸಿಕೊಂಡಿದ್ದಾರೆ; ಇದರಿಂದ ಮಹಿಳಾ ಕೃಷಿಕರ ಆರ್ಥಿಕ ಸ್ವಾವಲಂಬನೆ ಆಗಿದೆಯೇ:	ಮಹಿಳಾ ಕೃಷಿಕರಿಗೆ ವಿಶೇಷವಾದ ಸಬ್ಸಿಡಿ ಯೋಜನೆ ಇರುವುದಿಲ್ಲ. ಪ್ರಸ್ತುತ ಇರುವ ಇಲಾಖಾ ಯೋಜನೆಗಳಲ್ಲಿ ಶೇ.33ರಷ್ಟು ಅನುದಾನವನ್ನು ಮಹಿಳಾ ಫಲಾನುಭವಿಗಳಿಗೆ ಮೀಸಲಿಡಲಾಗುತ್ತಿದೆ. ಸಹ್ಯಾದ್ರಿ ಮಡಿಲಲ್ಲಿರುವ ಮಲೆನಾಡಿನ ಜಿಲ್ಲೆಗಳಲ್ಲಿ 2021-22ನೇ ಸಾಲಿನಲ್ಲಿ **2799** ಸಂಖ್ಯೆಯ ಮಹಿಳಾ ಫಲಾನುಭವಿಗಳು ಇಲಾಖಾ ಯೋಜನೆಗಳನ್ನು ಬಳಸಿಕೊಳ್ಳಲಾಗಿದೆ, ಮಹಿಳಾ ಕೃಷಿಕರ ಸ್ವಾವಲಂಬನೆ ಆಗಿರುತ್ತದೆ.

ಈ)	ಅತಿ ಮಳೆಯಿಂದ ಹಾನಿಗೀಡಾಗಿರುವ ತೋಟಗಾರಿಕಾ ಬೆಳೆಗಳಾವುವು; ಮಲೆನಾಡಿನಲ್ಲಿ ಯಾವ ರೀತಿಯ ಬೆಳೆಗಳ ಹಾನಿಗೀಡಲಾಗಿದೆ; ನಷ್ಟದ ಪ್ರಮಾಣ ಅಂದಾಜಿಸಲಾಗಿದೆಯೇ; ಪರಿಹಾರ ಯಾವ ಪ್ರಮಾಣದಲ್ಲಿ ಯಾವಾಗ ನೀಡಲಾಗುವುದು?	ಅತಿ ಮಳೆಯಿಂದ ಮೆಣಸಿನಕಾಯಿ, ಈರುಳ್ಳಿ, ಕರಿಮೆಣಸು, ಟೋಮ್ಯಾಟೋ, ದ್ರಾಕ್ಷಿ, ಅಡಿಕೆ, ಆಲೂಗಡ್ಡೆ,ಶುಂಠಿ, ಬಾಳೆ, ಪಪ್ಪಾಯ, ಹೂವುಗಳು ಹಾಗೂ ಇತರೆ ತೋಟಗಾರಿಕೆ ಬೆಳೆಗಳು ಹಾನಿಯಾಗಿರುತ್ತವೆ. ಮಲೆನಾಡಿನಲ್ಲಿ ಪ್ರಮುಖವಾಗಿ ಕಾಫಿ, ಕರಿಮೆಣಸು, ಅಡಿಕೆ ಮತ್ತು ಇತರೆ ಬೆಳೆಗಳು ಹಾನಿಯಾಗಿರುತ್ತದೆ. ಒಟ್ಟು ನಷ್ಟದ ಪ್ರಮಾಣ ರೂ. 1699.98 ಕೋಟಿ ಮೌಲ್ಯದಷ್ಟು ಬೆಳೆಹಾನಿಯಾಗಿರುವುದಾಗಿ ಅಂದಾಜಿಸಲಾಗಿರುತ್ತದೆ. ಹಾನಿಗೊಳಗಾದ ತೋಟಗಾರಿಕೆ ಬೆಳೆಗಳಿಗೆ ರಾಷ್ಟ್ರೀಯ/ ರಾಜ್ಯ ವಿಪತ್ತು ಪರಿಹಾರ ನಿಧಿ (NDRF/SDRF) ಮಾರ್ಗಸೂಚಿಯನ್ವಯ ಪ್ರತಿ ಹೆಕ್ಟೇರ್ ವಾರ್ಷಿಕ ಮಳೆಯಾಶ್ರಿತ ಬೆಳೆಗಳಿಗೆ ರೂ. 6800.00 ವಾರ್ಷಿಕ ನೀರಾವರಿ ಬೆಳೆಗಳಿಗೆ ರೂ.13500.00 ಮತ್ತು ಬಹುವಾರ್ಷಿಕ ಬೆಳೆಗಳಿಗೆ ರೂ.18000.00 ರಂತೆ ಪ್ರತಿ ಫಲಾನುಭವಿಗೆ ಗರಿಷ್ಟ 2.00 ಹೆಕ್ಟೇರ್ ವರೆಗೆ ಕಂದಾಯ ಇಲಾಖೆಯ ಮುಖಾಂತರ ಪರಿಹಾರಧನ ವಿತರಿಸಲಾಗುತ್ತಿದೆ.

HORTI 584 HGM 2021

(ಮುನಿರತ್ನ)
ತೋಟಗಾರಿಕೆ ಮತ್ತು ಯೋಜನೆ,
ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು

ಅನುಬಂಧ - 1

ಸಹ್ಯಾದ್ರಿ ಮಡಿಲಲ್ಲಿರುವ ಮಲೆನಾಡಿನ ಜಿಲ್ಲೆಗಳಲ್ಲಿ ಬೆಳೆಯಲಾಗುತ್ತಿರುವ ತೋಟಗಾರಿಕೆ ಬೆಳೆಗಳ ವಿಸ್ತೀರ್ಣ ಹಾಗೂ ಉತ್ಪಾದನೆಯ ವಿವರ

ವಿಸ್ತೀರ್ಣ : ಹೆಕ್ಟೇರ್ ಗಳಲ್ಲಿ
ಉತ್ಪಾದನೆ : ಮೆ.ಟನ್ ಗಳಲ್ಲಿ

ಕ್ರ.ಸಂ	ಮಲೆನಾಡಿನ ಜಿಲ್ಲೆಗಳು	ಹಣ್ಣುಗಳು		ತರಕಾರಿಗಳು		ಸಾಂಬಾರು ಬೆಳೆಗಳು		ತೋಟದ ಬೆಳೆಗಳು		ವಾಣಿಜ್ಯ ಪುಷ್ಪಗಳು		ಔಷಧೀಯ ಬೆಳೆಗಳು		ಸುಗಂಧಿತ ಬೆಳೆಗಳು		ಒಟ್ಟು	
		ವಿಸ್ತೀರ್ಣ	ಉತ್ಪನ್ನ	ವಿಸ್ತೀರ್ಣ	ಉತ್ಪನ್ನ	ವಿಸ್ತೀರ್ಣ	ಉತ್ಪನ್ನ	ವಿಸ್ತೀರ್ಣ	ಉತ್ಪನ್ನ	ವಿಸ್ತೀರ್ಣ	ಉತ್ಪನ್ನ	ವಿಸ್ತೀರ್ಣ	ಉತ್ಪನ್ನ	ವಿಸ್ತೀರ್ಣ	ಉತ್ಪನ್ನ	ವಿಸ್ತೀರ್ಣ	ಉತ್ಪನ್ನ
1	ಉತ್ತರ ಕನ್ನಡ	10545	321166	636	13318	5947	20766	45145	136086	56	487	10	59	20	601	62359	492483
2	ಶಿವಮೊಗ್ಗ	13582	353464	448	8021	10938	60032	102598	156457	142	1105	11	41	9	75	127728	579195
3	ಉಡುಪಿ	2318	62749	184	3289	1314	689	71010	231751	99	670	0	0	12	100	74948	299290
4	ಚಿಕ್ಕಮಗಳೂರು	6208	106985	15469	238547	41925	22161	119430	268103	117	876	6	29	4	39	183158	636740
5	ಹಾಸನ	7191	132133	23483	308361	44180	70099	115308	238228	888	8315	0	0	3	75	191053	757210
6	ದಕ್ಷಿಣ ಕನ್ನಡ	4982	110518	58	461	7211	1714	161416	347353	24	121	7	26	0	0	173698	460193
7	ಕೊಡಗು	7716	170604	752	20170	17600	20448	15944	28725	1	12	0	0	7	63	42020	240022

ತೋಟಗಾರಿಕೆ ಜಂಟಿ ನಿರ್ದೇಶಕರು
ಯೋಜನೆ